5) ಬೆಳಗಾಂ - ಬೂದಿಹಾಳ - ಅಂಕಲಗಿ- ಗೋಕಾಕ್ ರಸ್ತೆ.

6) ಸುಳಗಿ - ಬೆಳಕುಂಡಿ ರಕ್ಕಸಗೊಪ್ಪ ರಸ್ತೆ.

7) ಬೆಳಗಾಂ-ಬೆಳಗುಂಡಿ ರಸ್ತೆ.

ಮುಖ್ಯ ಜಿಲ್ಲಾ ರಸ್ತೆಗಳನ್ನಾಗಿ ಮೇ 1992ರಲ್ಲಿ ಮೇಲ್ದರ್ಜೆಗೇರಿಸಿದ ರಸ್ತೆಗಳು :-

8) ಕಿನಿಯೆದಿಂದ ದೇಸೂರ ವಯಾ ವಾಗವಡೆ ಜೇಡನ ರಸ್ತೆ.

9) ಹಿಂಡಲಗಾ ಗೋಜಗೆ, ಬೆಕ್ಕಿನಕೇರಿ, ಕೂವಾಡ ಮಹಾರಾಷ್ಟ್ರ ರಾಜ್ಯದ ರಗಡಿ ಹೊರಗೆ ಗಡಿ ರಸ್ತೆ.

10) ದೇಸೂರ - ನಂದಿಹಳ್ಳಿ, ಗಜಪತಿ ರಸ್ತೆ.

11) ಮಡಗಾವ ಯಳ್ಳೂರ ರಾಜಹಂಸಗಡ ರಸ್ತೆ.

12) ಬೆಂಡಿಗೇರಿ, ಕಲಾರಕೊಪ್ಪ ರಸ್ತೆ, ವಯಾ ಸುತಗಟ್ಟಿ, ಹಲಗಿನ ಮರಡಿ, ಕೆ.ಕೆ.ಕೊಪ್ಪ ರಸ್ತೆ (ರಾಷ್ಟ್ರೀಯ ಹೆದ್ದಾರಿ - 4 ರ ಹೊರಗಿನ ರಸ್ತೆ).

13) ಕಂಗ್ರಾಳಿ ಅಗಸಗಾ - ಹಂದಿಗಾನೂರ ಸುತಗಟ್ಟಿ ರಾಷ್ಟ್ರೀಯ ಹೆದ್ದಾರಿ - 4 ರವರೆಗಿನ ರಸ್ತೆ.

14) ಬಾಗೇವಾಡಿ - ಬಸಾಪುರ ವಯಾ ಉಡಗಿ ರಾಯಚೂರು ಬಾಟಿ ರಸ್ತೆ - ರಾಜ್ಯ ಹೆದ್ದಾರಿ ಕೊಡುವ ರಸ್ತೆ.

15) ಹಲಗ - ತಿಗಡಿ ರಸ್ತೆ.

ವಿಷಯ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಇಲಾಖೆ ಕೆರೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 377 (235)

ಶ್ರೀ ಸಿ. ಬಸವರಾಜ್ (ಬ್ರಹ್ಮಾವರ) - ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟಂತೆ ಇಲಾಖೆಯಲ್ಲಿ ಕೆರೆಗಳ ಪಟ್ಟಿಯ ದಾಖಲಾತಿ ಇದೆಯೇ (ವಿವರ ನೀಡುವುದು) :

ಆ) ದೇವಸ್ಥಾನದ ಕೆರೆಗಳು ಈ ಪಟ್ಟಿಯಲ್ಲಿ ಸೇರ್ಪಡೆಯಾಗುತ್ತದೆಯೇ, ಆಗಿದ್ದಲ್ಲಿ, ದೇವಸ್ಥಾನಗಳ ಕೆರೆಗಳ ಸಂಖ್ಯೆ ಎಷ್ಟು (ಹೆಸರು ಸಹಿತ ವಿವರ ನೀಡುವುದು);

ಇ) ದೇವಸ್ಥಾನದ ಕೆರೆಗಳು ಹೂಳು ತುಂಬಿರುವುದು ದಂಡೆ ಒಡೆದಿರುವುದು, ಇತ್ಯಾದಿ ಕಾರಣಗಳಿಂದ ನಾದುರಸ್ತಿಯಲ್ಲಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ ; ಸದರಿ ಕೆರೆಗಳನ್ನು ದುರಸ್ತಿಗೊಳಿಸಲು ಇಲಾಖೆಯು ಕ್ರಿಯಾಯೋಜನೆಯನ್ನು ಹೊಂದಿದೆಯೇ?

ಈ) ದೇವಸ್ಥಾನಗಳ ಕೆರೆಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಕ್ಕೆ ಹೊಂದಿಕೊಂಡಿರುವ ಊರುಗಳಿಗೆ ಮತ್ತು ಜಮೀನುಗಳಿಗೆ ನೀರಿನ ವಿಪುಲ ಅವಕಾಶ ಮತ್ತು ಅಂತರಜಲವನ್ನು ಒದಗಿಸುತ್ತಿದ್ದುದು ನಿಜವಲ್ಲವೆ?

ಶ್ರೀ ಎಂ. ಪಿ. ಕೇಶವಮೂರ್ತಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಇದೆ.

ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಆಗಿದೆ. ದೇವಸ್ಥಾನದ ಕೆರೆಗಳ ಒಟ್ಟು ಸಂಖ್ಯೆ 13 ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಗಮನಕ್ಕೆ ಬಂದಿದೆ.

ಮಂಗಳೂರು ಸಣ್ಣ ನೀರಾವರಿ ವಿಭಾಗಕ್ಕೆ ಸೇರಿದ ಬಂಟ್ವಾಳ ತಾಲ್ಲೂಕಿನ ದೇವಸ್ಥಾನದ ಕೆರೆಯಾದ ಕಾರಿಂಜೇಶ್ವರ ಕೆರೆಯ ಜೀರ್ಣೋದ್ಧಾರ ಕಾಮಗಾರಿಯನ್ನು 1993-94ನೇ ಸಾಲಿನ ಆಯವ್ಯಯದಲ್ಲಿ ಸೇರಿಸಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿದೆ. ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ ಯಾವ ಕ್ರಿಯಾ ಯೋಜನೆಗಳನ್ನು ಹೊಂದಿರುವುದಿಲ್ಲ.

ಈ) ನಿಜ.

ವಿಧಾನ ಸಭಾ ಸದಸ್ಯರಾದ ಶ್ರೀ ಪಿ. ಬಸವರಾಜ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 235ಕ್ಕೆ

ಅನುಬಂಧ

ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಸಣ್ಣ ನೀರಾವರಿ ಇಲಾಖೆ ಮತ್ತು ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ ಬರುವ ಕೆರೆಗಳ ವಿವರ.

ಕ್ರಮ ಸಂಖ್ಯೆ	ಕೆರೆಯ ವಿವರ	ತಾಲ್ಲೂಕು	ಅಚ್ಚುಕಟ್ಟು ಹೆಕ್ಟೇರ್‌ಗಳಲ್ಲಿ
	ಸಣ್ಣ ನೀರಾವರಿ ವಿಭಾಗ, ಮಂಗಳೂರು		
1)	ಆನೆಕೆರೆ	ಕಾರ್ಕಳ	38.65
2)	ಜಾಂಡಾರು ಮದಗ ಕೆರೆ	ಉಡುಪಿ	122.72
3)	ವಾರಂಬಳ್ಳಿ ಗ್ರಾಮದ ಗರಡಿಮನೆ	ಉಡುಪಿ	61.30
4)	ವಲ್ಲೂರು ಗ್ರಾಮದ ವಾಳಾಂತ್ರಕೆರೆ	ಉಡುಪಿ	40.30
5)	ಕುಂದಾರ ಗ್ರಾಮದ ಹಿರೇಕೆರೆ ಮದಗ	ಕುಂದಾಪುರ	70.20
6)	ಕಾವ್ರೂರು ಕೆರೆ	ಮಂಗಳೂರು	69.48
7)	ಕಾರಿಂಜೇಶ್ವ ರ ಕೆರೆ	ಬಂಟ್ವಾಳ	41.94
	ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗ ಮಂಗಳೂರು		
1)	45 ಕೆರೆಗಳು	ಮಂಗಳೂರು	410.00
2)	26 ಕೆರೆಗಳು	ಬಂಟ್ವಾಳ	172.00
3)	22 ಕೆರೆಗಳು	ಪುತ್ತೂರು	81.00
4)	7 ಕೆರೆಗಳು	ಸುಳ್ಯಾ	92.00
	ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದ ದೇವಸ್ಥಾನ ಕೆರೆಗಳ ವಿವರ :		
1)	ಕಾರಿಂಜೇಶ್ವರ ಕೆರೆ	ಬಂಟ್ವಾಳ್	41.94
2)	ಕಂಕವಾಡಿ ಗ್ರಾಮದಲ್ಲಿರುವ ಪಂಚಲಿಂಗೇಶ್ವರ ಕೆರೆ	ಮಂಗಳೂರು	4.20
3)	ಕಾವಲ ಮುಡನೂರು ಗ್ರಾಮದ ಗಗನ ತೀರ್ಥೇಶ್ವರ ತೀರ್ಥೇಶ್ವರ ಕೆರೆ.	ಬಂಟ್ವಾಳ	4.80

4)	ಪಡುವೀಡಿ ಗ್ರಾಮದ ಕುಡಿವೀಡಿ ದೇವಲಾಯದ ಕೆರೆ	ಪುತ್ತೂರು	5.00
5)	ಮಡ್ಡರ್ಸೆ ದೇವರ ಕೆರೆ ಉಡುಪಿ	4.86	
6)	ಪುತ್ತೂರು ದೇವರ ಕೆರೆ	,,	11.96
7)	ಶಿವಳ್ಳಿ ದೇವರ ಕೆರೆ	,,	8.37
8)	ಕೊರಂಗರ್ರವಾಡಿ ಕೆಮ್ಮೂರು ದೇವಸ್ಥಾನದ ಕೆರೆ	,,	4.95
9)	ಅರೆವೂರು ಪಡು ಅರೆವೂರು ದೇವಸ್ಥಾನ ಕೆರೆ	,,	7.43
10)	ಮೂಡು ಅಲೆವೂರು ದೇವಸ್ಥಾನ ಕೆರೆ	,,	6.52
11)	ಕಟ್ಪಂಗೆರೆ ದೇವಸ್ಥಾನ ಕೆರೆ	,,	5.99
12)	ವರಂಗ ಮಂಡಲದ ನರರೇಶ್ವರ ಕೆರೆ	ಕಾರ್ಕಳ	6.50
13)	ಕಾಂತಾವರ ಗ್ರಾಮದ ದೇವಸ್ಥಾನ ಕೆರೆ	,,	8.20

ವಿಷಯ : ಬೆಳಗಾಂ ತಾಲ್ಲೂಕಿನ ರಸ್ತೆಗಳು ಅತಿವೃಷ್ಟಿಯಿಂದ ಹಾನಿಯಾಗಿರುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 378 (524)

ಶ್ರೀ ಬಿ.ಐ. ಪಾಟೀಲ್ (ಉಚ್ಛಾಂಗವ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಇತ್ತೀಚಿನ ಅತಿವೃಷ್ಟಿಯಿಂದ ಬೆಳಗಾಂವ ತಾಲ್ಲೂಕಿನ ರಸ್ತೆಗಳು ಬಹಳಷ್ಟು ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ರಸ್ತೆಗಳ ದುರಸ್ತಿಗೆ ಸರಕಾರವು ಏನು ಕ್ರಮ ಕೈಗೊಂಡಿರುತ್ತದೆ?

ಇ) ಈ ರಸ್ತೆಗಳ ದುರಸ್ತಿಗೆ ವಿಶೇಷ ಅನುದಾನವನ್ನು ಸರಕಾರ ಮಂಜೂರು ಮಾಡುವುದೇ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ತಾತ್ಕಾಲಿಕವಾಗಿ ತುರ್ತು ದುರಸ್ತಿಯನ್ನು ಕೈಗೊಂಡಿದೆ.

ಇ) ಶಾಶ್ವತ ದುರಸ್ತಿಗಾಗಿ ಅತಿವೃಷ್ಟಿ ಪರಿಹಾರ ನಿಧಿಯಿಂದ ವಿಶೇಷ ಅನುದಾನಕ್ಕಾಗಿ ಬೇಡಿಕೆ ಸಲ್ಲಿಸಲಾಗಿದೆ.